**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1157 |
| ಸದಸ್ಯರ ಹೆಸರು | : | ಶ್ರೀಮತಿ ಬಲ್ಕೀಸ್ ಬಾನು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 18.03.2025 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| | ಪ್ರಶ್ನೆ | ಉತ್ತರ |
|---|---|---|
| ಅ) | ಶಿವಮೊಗ್ಗ ಮಹಾನಗರ ಪಾಲಿಕೆಯ ಹಿಂದಿನ ನಗರ ಸಭೆ ವತಿಯಿಂದ ವಿನೋಬನಗರ 2ನೇ ಹಂತ ಬಡಾವಣೆ ನಿರ್ಮಿಸಲು ಎಷ್ಟು ಎಕರೆ ಜಮೀನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ; ಇದರಲ್ಲಿ ಖಾಸಗಿ ಒಡೆತನದ ಭೂಮಿ / ನಿವೇಶನಗಳೆಷ್ಟು; (ವಿವರ ನೀಡುವುದು) | ಹಿಂದಿನ ಶಿವಮೊಗ್ಗ ನಗರಸಭೆಯಿಂದ ಪ್ರಸ್ತುತ ಶಿವಮೊಗ್ಗ ಮಹಾನಗರ ಪಾಲಿಕೆ ವಿನೋಬನಗರ 2ನೇ ಹಂತದ ಲೇ-ಔಟ್ ರಚನೆಗಾಗಿ ಶಿವಮೊಗ್ಗ ತಾಲ್ಲೂಕು ಕಲ್ಲಹಳ್ಳಿ ಗ್ರಾಮದ ಖಾಸಗಿ ಒಡೆತನದ ಸರ್ವೆ ನಂ.01, 04, 05, 14, 16, 32, 43, 44, 45/1, 45/2, 29, 30, 31/1 ರಿಂದ 31/17, 109, 110, 111/1A, 111/1B, 111/2, 112, 113/1, 113/2, 114/A, 114/B, 115, 113, 119 ಮತ್ತು ಸರ್ವೆ ನಂ.120 ರಲ್ಲಿನ ಒಟ್ಟು.83 ಎಕರೆ 21 ಗುಂಟೆ ವಿಸ್ತೀರ್ಣದ ಜಮೀನುಗಳನ್ನು ಪ್ರಾಥಮಿಕ ಅಧಿಸೂಚನೆ ದಿನಾಂಕ:29-10-1976 ಮತ್ತು ಅಂತಿಮ ಅಧಿಸೂಚನೆ ಸಂಖ್ಯೆ: LAQ/RHS/SR-18/76-77 ದಿನಾಂಕ:31-05-1980 ರಂತೆ ಭೂ ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ.<br>ಈ ರೀತಿ ಭೂಸ್ವಾಧೀನಪಡಿಸಿಕೊಂಡ 83 ಎಕರೆ 21 ಗುಂಟೆ ಪ್ರದೇಶದ ಜೊತೆಗೆ ಭೂ ಸ್ವಾಧೀನತೆಗೆ ಒಳಪಡದೇ ಇದ್ದ 5 ಎಕರೆ 24 ಗುಂಟೆ (ಸರ್ವೆ ನಂ.124ರ 2 ಎಕರೆ 12 ಗುಂಟೆ ಮತ್ತು ಸರ್ವೆ ನಂ.31/18 ರಿಂದ 31/57 ರವರೆಗಿನ 3 ಎಕರೆ 12 ಗುಂಟೆ) ಪ್ರದೇಶವನ್ನೂ ಸೇರಿಸಿಕೊಂಡು ಒಟ್ಟು 89-05 ಎಕರೆ ಪ್ರದೇಶಕ್ಕೆ ವಿನ್ಯಾಸ ನಕ್ಷೆಯನ್ನು ತಯಾರಿಸಲಾಗಿರುತ್ತದೆ. ಈ ವಿನ್ಯಾಸವು ವಿವಿಧ ಅಳತೆಯ 1583 ನಿವೇಶನಗಳು, ರಸ್ತೆ, ಪಾರ್ಕ್, ಸಾರ್ವಜನಿಕ ಉಪಯೋಗಿ ನಿವೇಶನಗಳು ಒಳಗೊಂಡಿರುತ್ತದೆ. |
| ಆ) | ಯಾವ ಕಾಯ್ದೆ ಅಡಿಯಲ್ಲಿ ಸದರಿ ಭೂಸ್ವಾಧೀನ ಕ್ರಮ ಕೈಗೊಳ್ಳಲಾಗಿದೆ; | ಕರ್ನಾಟಕ ಅಕ್ವಿಜಿಷನ್ ಆಫ್ ಲ್ಯಾಂಡ್ ಫಾರ್ ಗ್ರಾಂಟ್ ಆಫ್ ಹೌಸ್ ಸೈಟ್ಸ್ ಆಕ್ಟ್ 1972 ರ ಅಡಿಯಲ್ಲಿ ಭೂಸ್ವಾಧೀನ ಕ್ರಮ ಕೈಗೊಳ್ಳಲಾಗಿದೆ. |
| ಇ) | ಈ ಪೈಕಿ ಹೈಕೋರ್ಟ್ ಆದೇಶದ ಮೇರೆಗೆ ಭೂಸ್ವಾಧೀನ ರದ್ದಾದ ಪ್ರಕಣಗಳೆಷ್ಟು; (ಸಂಪೂರ್ಣವಾಗಿ ವಿವರ ನೀಡುವುದು) | ಈ ಪೈಕಿ ಹೈಕೋರ್ಟ್ ಆದೇಶದ ಮೇರೆಗೆ ಒಟ್ಟು 52 ಪ್ರಕರಣಗಳಲ್ಲಿ 15 ಎಕರೆ 31½ ಗುಂಟೆ ಪ್ರದೇಶವು ಭೂಸ್ವಾಧೀನತೆಯಿಂದ ರದ್ದಾಗಿರುತ್ತದೆ. |
| ಈ) | ಹೈಕೋರ್ಟ್ ಆದೇಶದ ಪ್ರಕಾರ ಭೂಸ್ವಾಧೀನ ರದ್ದಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಪರಿಹಾರ ರೂಪವಾಗಿ ಎಷ್ಟು ಜನರಿಗೆ ಬದಲಿ ನಿವೇಶನ ಸುಫರ್ದು ಪತ್ರದ ಮೂಲಕ ನಿವೇಶನ ನೀಡಲಾಗಿದೆ; | ಹೈಕೋರ್ಟ್ ಆದೇಶದಂತೆ ಭೂ ಸ್ವಾಧೀನತೆ ರದ್ದುಪಡಿಸಿಕೊಂಡಿದ್ದ ರಿಟ್ ಅರ್ಜಿದಾರರ ಜಮೀನನ್ನು ಭೂ ಮಾಲೀಕರಿಗೆ ಯಥಾಸ್ಥಿತಿಯಲ್ಲಿ ವಾಪಸ್ಸು ನೀಡಬೇಕಾಗಿತ್ತು. ಆದರೆ ಆ ವೇಳೆಗಾಗಲೇ ನಗರಸಭೆಯಿಂದ ಲೇ-ಔಟ್ ರಚನೆ ಮಾಡಿ, ರಚಿಸಲಾದ ನಿವೇಶನಗಳನ್ನು ಸರ್ಕಾರದ ಮಂಜೂರಾತಿ ಪಡೆದು ನಿವೇಶನ ರಹಿತರಿಗೆ ಹಂಚಿಕೆ ಮಾಡಲಾಗಿತ್ತು. ನಿವೇಶನ ಹಂಚಿಕೆ ಪಡೆದವರು ಮನೆಗಳನ್ನು ನಿರ್ಮಿಸಿಕೊಂಡಿದ್ದ ಕಾರಣ ಹಾಗೂ ಭೂ ಸ್ವಾಧೀನತೆ ರದ್ದುಪಡಿಸಿಕೊಂಡಿದ್ದ ಕೆಲವು ಜಾಗಗಳಲ್ಲಿ ರಸ್ತೆ, ಪಾರ್ಕ್ ಇತ್ಯಾದಿ ವಿನ್ಯಾಸಗೊಂಡಿದ್ದ |

| | | |
|---|---|---|
| | | ಕಾರಣಗಳಿಂದಾಗಿ ರಿಟ್ ದಾರರಿಗೆ ಅವರ ಭೂಮಿ ಯಥಾಸ್ಥಿತಿಯ ವಾಪಾಸ್ಸು ನೀಡಲು ಸಾಧ್ಯವಾಗದೇ ಕ್ಲಿಷ್ಟ ಪರಿಸ್ಥಿತಿ ಉಂಟಾಗಿದ್ದ ಹಿನ್ನಲೆಯಲ್ಲಿ, ವಿವಾದ ಬಗೆಹರಿಸಲು ಸರ್ಕಾರದ ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ದಿನಾಂಕ:25-06-1997 ರಂದು ರಿಟ್ ದಾರರೊಂದಿಗೆ ಸಂಧಾನ ಸಭೆ ನಡೆಸಿ, ಭೂ ಸ್ವಾಧೀನತೆ ರದ್ದುಪಡಿಸಿಕೊಂಡ ಜಮೀನು ಮಾಲೀಕರಿಗೆ ಪ್ರತಿ ಎಕರೆ ಒಂದಕ್ಕೆ 7200 ಚ.ಅಡಿ ಅಭಿವೃದ್ಧಿ ಹೊಂದಿದ ನಗರಸಭೆಯ ನಿವೇಶನಗಳನ್ನು ಹಾಗೂ ತುಂಡು ಭೂಮಿ ಮಾಲೀಕರಿಗೆ ಅವರ ಮೂಲ ಜಾಗದ ಅಳತೆಯ ಶೇ.50 ರಷ್ಟು ಅಥವಾ ಅದಕ್ಕೆ ಕಡಿಮೆ ಇಲ್ಲದಷ್ಟು ಅಳತೆಯ ಬದಲಿ ನಿವೇಶನಗಳನ್ನು ಬದಲಿಯಾಗಿ ನೀಡಲು ನಡವಳಿ ಮಾಡಲಾಗಿರುತ್ತದೆ.<br><br>ಅದರಂತೆ ಭೂ ಸ್ವಾಧೀನತೆ ರದ್ದುಪಡಿಸಿಕೊಂಡಿದ್ದ ರಿಟ್ ದಾರರಿಗೆ ಮತ್ತು ಭೂ ಸ್ವಾಧೀನತೆ ಆಗದೇ ಲೇ-ಔಟ್ ನಲ್ಲಿ ಸೇರಿಸಿಕೊಂಡು ನಿವೇಶನಗಳನ್ನು ರಚಿಸಿದಂತಹ ರೆವಿನ್ಯೂ ಭೂ ಮಾಲೀಕರಿಗೆ ಮಾತ್ರ ಬದಲಿ ನಿವೇಶನಗಳನ್ನು ನೀಡಬೇಕಿತ್ತು, ಭೂ ಸ್ವಾಧೀನತೆ ರದ್ದುಪಡಿಸಿಕೊಂಡಿರುವ ಕೆಲವು ರಿಟ್ ಅರ್ಜಿದಾರರ ಜೊತೆಗೆ ಭೂ ಸ್ವಾಧೀನ ಆಗಿ ಅವಾರ್ಡ್ ರಚಿಸಿ ಅವಾರ್ಡ್ ಪಡೆಯದೇ ಇರುವ ಕೆಲವು ಭೂ ಮಾಲೀಕರನ್ನು ಸೇರಿಸಿಕೊಂಡು ಒಟ್ಟಾರೆಯಾಗಿ 80 ಜನರಿಗೆ ಪರಿಹಾರವಾಗಿ ಬದಲಿ ನಿವೇಶನ ಸುಪರ್ದು ಪತ್ರಗಳ ಮೂಲಕ 212 ನಿವೇಶನಗಳನ್ನು ನೀಡಲಾಗಿರುತ್ತದೆ. |
| ಉ) | ಬದಲಿ ನಿವೇಶನ ಮಂಜೂರಾತಿಗೆ ಸರ್ಕಾರಿ ಆದೇಶವಾಗಿದ್ದು ಹಾಗೂ ಸರ್ಕಾರಿ ಆದೇಶಕ್ಕೆ ಬಾಕಿ ಇರುವ ಪ್ರಕರಣಗಳೆಷ್ಟು? (ವಿವರ ನೀಡುವುದು) | ಈ ವರೆವಿಗೂ ವಿವಿಧ ಹಂತಗಳಲ್ಲಿ ಸರ್ಕಾರವು ಆದೇಶ ಹೊರಡಿಸಿರುವ ಒಟ್ಟು ಪ್ರಕರಣಗಳ ಸಂಖ್ಯೆ:29 ಆಗಿದ್ದು, ಅನುಮೋದನೆ ನೀಡಿರುವ ನಿವೇಶನಗಳ ಸಂಖ್ಯೆ:45 ಆಗಿರುತ್ತದೆ. ಹಾಗೂ ಸರ್ಕಾರದ ಅನುಮೋದನೆಗೆ ಪ್ರಸ್ತಾವನೆಗೆ ಸಲ್ಲಿಕೆಯಾಗಿರುವ ಪ್ರಕರಣಗಳ ಸಂಖ್ಯೆ.67 ನಿವೇಶನಗಳ ಸಂಖ್ಯೆ.140 ಆಗಿರುತ್ತದೆ.<br><br>ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರಲ್ಲಾಗಲೀ ಮತ್ತು ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976 ರಲ್ಲಾಗಲೀ ಕಾಯ್ದೆಯಲ್ಲಿ ಈ ರೀತಿ ಭೂ ಸ್ವಾಧೀನತೆ ರದ್ದಾದ ಜಮೀನುಗಳಿಗೆ ಪರಿಹಾರ ರೂಪದಲ್ಲಿ ಬದಲಿ ನಿವೇಶನಗಳನ್ನು ನೀಡಲು ಅವಕಾಶ ಕಲ್ಪಿಸಿರುವುದಿಲ್ಲ.<br><br>ಮುಂದುವರೆದು, ಶಿವಮೊಗ್ಗ ಮಹಾನಗರ ಪಾಲಿಕೆಯಿಂದ ಇನ್ನುಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಬದಲಿ ನಿವೇಶನಗಳನ್ನು ನೀಡುವ ಸಂಬಂಧ ಮಂಜೂರಾತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಶಿವಮೊಗ್ಗ ಮಹಾನಗರ ಪಾಲಿಕೆಯ ವಿನೋಬನಗರ 2ನೇ ಹಂತದಲ್ಲಿ ಬದಲಿ ನಿವೇಶನ ನೀಡಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಮಗ್ರವಾಗಿ ಪರಿಶೀಲಿಸಿ ಅಗತ್ಯವಿದ್ದಲ್ಲಿ ಸ್ಥಳ ಪರಿಶೀಲಿಸಿ ಪ್ರಸ್ತಾಪಿತ ಬಡಾವಣೆಯನ್ನು ರಚಿಸಲು ಭೂಸ್ವಾಧೀನಪಡಿಸಿಕೊಂಡ ಪ್ರಾರಂಭದಿಂದ ಇಲ್ಲಿಯವರೆಗಿನ ಪ್ರಕರಣದ ಸಂಪೂರ್ಣ ವಿವರಗಳೊಂದಿಗೆ ಹಾಗೂ ಆಯುಕ್ತರು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿರುವ ಎಲ್ಲಾ ಪ್ರಕರಣಗಳನ್ನು ಪ್ರತ್ಯೇಕವಾಗಿ ನೈಜತೆಯನ್ನು ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ಸಮಗ್ರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು |

| | | |
|---|---|---|
| | | ಪ್ರಾದೇಶಿಕ ಆಯುಕ್ತರು ಬೆಂಗಳೂರು ವಿಭಾಗ ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ಸರ್ಕಾರದ ಆದೇಶ ಸಂಖ್ಯೆ: ನಅಇ 16 ಶಿಮಪಾ 2023, ದಿನಾಂಕ: 15-02-2025 ರಲ್ಲಿ ಆದೇಶಿಸಲಾಗಿರುತ್ತದೆ. ಸದರಿ ಸಮಿತಿಯು ಪ್ರಕರಣಕ್ಕೆ ಸಂಬಂಧಿಸಿದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ನಿಯಮಾನುಸಾರ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳಲಾಗುವುದು. |

**ಸಂಖ್ಯೆ: ನಅಇ 17 ಶಿಮಪಾ 2025 (ಇ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ
ಯೋಜನಾ ಸಚಿವರು